



ಎತ್ತಿನಹೊಳೆ ಕಾಮಗಾರಿಯಿಂದ ಬೆಟ್ಟದ ಒಳಗಿನ ಬಂಡೆಗಳನ್ನು ಸ್ಫೋಟಿಸುವಾಗ ಶಿಖರಗಳ ಒಳಗಿನ ನೀರಿನ ಸೆಲೆಗಳ ಪದರಗಳಲ್ಲಿ ಅಸಮತೋಲನ ಉಂಟಾಗಿ – ಶಿರಾಡಿ ಘಾಟಿಯಿಂದ ಚಾರ್ಮಾಡಿ, ಬಿಸಿಲೆ, ಎಳನೀರು ಘಾಟಿಯವರೆಗೆ ಭೂಕುಸಿತಗಳಾಗುತ್ತಿವೆ. ಕಾಮಗಾರಿಗಳಿಗೆ ಬಳಸುವ ಭಾರೀ ಯಂತ್ರಗಳು, ಸ್ಫೋಟಕಗಳು ಬೆಟ್ಟದ ಸೂಕ್ಷ್ಮರಚನೆಯನ್ನು ಭೇದಿಸುತ್ತಿವೆ. ನೀರಿನ ಸಂಗ್ರಹದ ಸಮತೋಲನ ತಪ್ಪುತ್ತಿದೆ.

**–ದಿನೇಶ್ ಹೊಳ್ಳ,**
ಸಹ್ಯಾದ್ರಿ ಸಂಚಯ ಸಂಚಾಲಕರು

ತಮ್ಮ ಜಮೀನನ್ನು ಹಾದುಹೋಗುವ ದೃಶ್ಯವನ್ನು ಆನಂದ ಗೌಡ ಮತ್ತು ಕೃಷ್ಣಪ್ಪ ಗೌಡರು ನೋಡಿ ಬೆಚ್ಚಿಬಿದ್ದಿದ್ದಾರೆ. ಅವರ ಕೃಷಿಗೆ ನೀರು ಒದಗಿಸುತ್ತಿದ್ದ ಸಣ್ಣ ತೋಡು, ಎರಡೇ ತಾಸಿನಲ್ಲಿ ಸುಮಾರು 18 ಅಡಿ ಅಗಲದ ತೊರೆಯಾಗಿ ಮಾರ್ಪಟ್ಟಿತ್ತು. ತೋಟ ಮತ್ತು ಹೊಲಗದ್ದೆಗಳ ಮೇಲೆ ಮರಳಿನ ರಾಶಿಬಿದ್ದು, ಕೃಷಿ ಪೂರ್ತಿ ನಾಶವಾಯಿತು. ಇದೀಗ ಮತ್ತೆ ಗದ್ದೆಗಳನ್ನು ಸಮತಟ್ಟು ಮಾಡಿ ಒಂದು ಬೆಳೆ ಮಾಡುತ್ತ ಜೀವನ ನಿರ್ವಹಿಸುತ್ತಿದೆ ಆನಂದ ಗೌಡರ ಕುಟುಂಬ.

ದುರ್ಗದ ಬೆಟ್ಟದ ಎರಡೂ ಮಗ್ಗುಲುಗಳಲ್ಲಿ ಹರಡಿಕೊಂಡಿರುವ ಎಲ್ಯರ ಕಂಡ, ದೈಪಿತ್ತಿಲ್, ಬೈಲ್, ದಿಡುಪೆ, ಕುಕ್ಕಾವು ಮುಂತಾದ ಪ್ರದೇಶಗಳಲ್ಲಿ ಸುಮಾರು 16 ಕೃಷಿ ಕುಟುಂಬಗಳಿವೆ. ಇವು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಅಂಚಿನಲ್ಲಿ ಇರುವುದರಿಂದ, ಇಲ್ಲಿನವರಿಗೆ ರಸ್ತೆ ಸೌಕರ್ಯಗಳೇನೂ ಇಲ್ಲ. ನೆಪಕ್ಕಷ್ಟೇ ವಿದ್ಯುತ್ ತಂತಿಗಳಿವೆ. ‘ಮೂಲಭೂತ ಸೌಕರ್ಯಗಳೇ ಇಲ್ಲದ ಈ ಸ್ಥಳದಿಂದ ನಮ್ಮನ್ನು ಸ್ಥಳಾಂತರಿಸಿ’ ಎಂದು ಈ 16 ಕುಟುಂಬಗಳು ಆರೇಳು ವರ್ಷಗಳಿಂದ ಸರ್ಕಾರಕ್ಕೆ ಮನವಿ ಮಾಡುತ್ತಲೇ ಇವೆ. ಆದರೆ ಸಮಸ್ಯೆ ಪರಿಹಾರವಾಗಿಲ್ಲ. ದುರ್ಗದ ಬೆಟ್ಟದಿಂದ ಪ್ರವಾಹದ ನೀರು ನುಗ್ಗಿ, ಅವರ ಸಮಸ್ಯೆ ಮತ್ತಷ್ಟು ಬಿಗಡಾಯಿಸಿತಷ್ಟೆ. ಹಸುಕರು, ಮನೆಮಠ ಬಿಟ್ಟು ಪುನರ್ವಸತಿ ಕೇಂದ್ರಕ್ಕೆ ತೆರಳಿದ್ದ ಜನರು ಮರಳಿ ಬರುವಷ್ಟರಲ್ಲಿ ತೋಟ, ಗದ್ದೆ, ಬೆಳೆಗಳನ್ನು ಕಳೆದುಕೊಂಡಿದ್ದರು.

2019ರಲ್ಲಿ ದುರ್ಗದ ಬೆಟ್ಟದ ಬುಡದಲ್ಲಿ ನಡೆದ ಭೂಕುಸಿತದ ಸಂದರ್ಭದಲ್ಲಿ ಸರ್ಕಾರವು, ಹಳ್ಳಿಗಳಿಂದ ಸುರಕ್ಷಿತ ಸ್ಥಳಕ್ಕೆ ನಾಗರಿಕರನ್ನು ತಾತ್ಕಾಲಿಕವಾಗಿ ಕರೆದೊಯ್ದು ಪುನರ್ವಸತಿ ಕಲ್ಪಿಸಿತ್ತು. ಭೂಕುಸಿತವು ದುರ್ಗದ ಬೆಟ್ಟದ ಒಂದು ಭಾಗದ ತಪ್ಪಲಿನ ಜನರಿಗಷ್ಟೇ ಆತಂಕ ಸೃಷ್ಟಿಸಿದ್ದಲ್ಲ; ಜಾವಳೆ, ದುರ್ಗದ ಗುಂಡಿ, ಮಧುಗುಂಡಿ, ಆಲೇಖಾನ್ ಬೆಟ್ಟ, ಬಿದಿರುತಳ, ಬೇಗೂರು, ಸುಂಕಸಾಲೆ ಸೇರಿದಂತೆ ಕಳಸ–ಚಾರ್ಮಾಡಿ ಘಾಟಿಯ ಆಸುಪಾಸಿನ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ನಾಗರಿಕರಲ್ಲಿ ಆತಂಕ ಸೃಷ್ಟಿಸಿದೆ. ನಂತರದ ವರ್ಷಗಳಲ್ಲಿ ಬೆಟ್ಟಗಳ ತಪ್ಪಲಿನಲ್ಲಿ ಭೂ ಕುಸಿತಗಳು ಆಗಾಗ ನಡೆಯುತ್ತಿವೆ. ಕಳೆದ ವರ್ಷ ಕುಕ್ಕೆ ಸುಬ್ರಹ್ಮಣ್ಯ ಸ್ನಾನ ಘಟ್ಟದ ಬಳಿಯ ಪರ್ವತಮುಖಿ ಗುಡ್ಡ ಕುಸಿದು ಮನೆಯ ಮೇಲೆ ಬಿದ್ದು, ಇಬ್ಬರು ಪುಟಾಣಿ ಮಕ್ಕಳು ಅಸುನೀಗಿದ್ದರು.

ಜನರು ಆತಂಕದಲ್ಲಿಯೇ ಬದುಕುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ ಎನಿಸುತ್ತದೆ. ಭಾರೀ ಪ್ರಮಾಣದ ಅವಘಡಗಳಾದಾಗ ವ್ಯಕ್ತವಾಗುವ ಸಂವೇದನಾಶೀಲತೆಯು, ಘಟನೆಯ ನೆನಪು ಮಾಸುತ್ತಿರುವಂತೆಯೇ ಒರಟಾಗಿಬಿಡುತ್ತದೇನೋ?

ಪರಿಸರಕ್ಕೆ ಸಂಬಂಧಿಸಿದಂತೆ ವಿಜ್ಞಾನಿಗಳು